## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆ - ಕೆಲವು ವೃಂದಗಳ ಬದಲಿ ಪದನಾಮೀಕರಣ ಆದೇಶ.

**ಪ್ರಸ್ತಾವನೆ:-** 1) ಸಾ.ಶಿ.ಇ. ಆಯುಕ್ತರ ಪತ್ರ ಸಂ. ಸಿ1(3)(1) ವೃನೇನಿ:ಸಾಪ/2001(ಭಾಗ-2) ದಿ: 9.1.2008.

2) ಆದೇಶ ಸಂ. ಇಡಿ 6 ಡಿಜಿಒ 2008 ದಿ: 13.2.2008.

3) ಸಾ.ಶಿ.ಇ. ಆಯುಕ್ತರ ಪತ್ರ ಸಂ: ಸಿ1(3)(1), ವೃನೇನಿ: ಸಾಪ/2001 (ಭಾಗ2) ದಿ: 11-4-2008.

* * *

ಮೇಲೆ ಓದಲಾದ ಕ್ರಸಂ. (1)ರ ದಿ: 9-1-2008ರಂದು ಆಯುಕ್ತರು, ಸಲ್ಲಿಸಿರುವ ಪ್ರಸ್ತಾವನೆಯಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ಕೆಲವು ಹುದ್ದೆಗಳನ್ನು ಬದಲಿ ಪುನರ್ ಪದನಾಮೀಕರಿಸಿ ಕ್ರಸಂ. (2)ರ ದಿ: 13-2-2008ರಂದು ಆದೇಶ ಹೊರಡಿಸಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು, ಮೇಲೆ ಓದಲಾದ ಕ್ರಸಂ. (3)ರ ದಿ: 11-4-2008ರ ಪತ್ರದಲ್ಲಿ ದಿನಾಂಕ 13-2-2008ರ ಆದೇಶದಲ್ಲಿ ಕೆಲವೊಂದು ಹುದ್ದೆಗಳ ಪದನಾಮವನ್ನು ಆಂಗ್ಲಭಾಷೆಯಿಂದ ತರ್ಜುಮೆ ಮಾಡುವಾಗ ತತ್ಸಮಾನ ಅರ್ಥ ಬಂದಿರುವುದಿಲ್ಲವೆಂದು ಹಾಗೂ ಕೆಲವೊಂದು ಹುದ್ದೆಗಳ ವೇತನ ಶ್ರೇಣಿಗಳು ತಪ್ಪಾಗಿ ನಮೂದಿಸಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ತಿದ್ದುಪಡಿ ಆದೇಶವನ್ನು ಹೊರಡಿಸುವಂತೆ ಕೋರಿದ್ದಾರೆ.

ಆಯುಕ್ತರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ದಿ: 13-2-2008ರಂದು ಹೊರಡಿಸಿದ ಆದೇಶವನ್ನು ಹಿಂದಕ್ಕೆ ಪಡೆದು, ಅದರ ಬದಲು ಸ್ಪಷ್ಟ ಆದೇಶವನ್ನು ಹೊರಡಿಸಲು ನಿರ್ಧರಿಸಿ ಸರ್ಕಾರ ಕೆಳಕಂಡ ಆದೇಶ ಹೊರಡಿಸಿದೆ.

**ಆದೇಶ ಸಂಖ್ಯೆ ಇಡಿ 6 ಡಿಜಿಓ 2008, ದಿನಾಂಕ 12-5-2008.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ಕೆಲವು ವೃಂದಗಳ ಬದಲಿ ಪದನಾಮೀಕರಣದ ಬಗ್ಗೆ ಇದೇ ಸಮಸಂಖ್ಯೆಯ ದಿನಾಂಕ: 13-2-2008ರಂದು ಹೊರಡಿಸಿದ ಆದೇಶವನ್ನು ವಾಪಸ್ಸು ಪಡೆದು, ಹುದ್ದೆಗಳನ್ನು ಅವುಗಳ ಮುಂದೆ ತೋರಿಸಿರುವಂತೆ ಬದಲಿ ಪುನರ್ ಪದನಾಮೀಕರಿಸಿ ಆದೇಶಿಸಿದೆ.

**ಭಾಗ-I**

| ಕ್ರ.ಸಂ. | ಹಾಲಿ ಇರುವ ಹುದ್ದೆಯ ಪದನಾಮ ಮತ್ತು ವೇತನ ಶ್ರೇಣಿ | ಬದಲಿ ಪದನಾಮೀಕರಿಸಿದ ಹುದ್ದೆ ಮತ್ತು ವೇತನ ಶ್ರೇಣಿ |
|---|---|---|
| 1 | ಹಿರಿಯ ಸಹಾಯಕ ನಿರ್ದೇಶಕರು, (ಕ್ರಾಫ್ಟ್)<br>ರೂ. 14050-25050 | ಹಿರಿಯ ಸಹಾಯಕ ನಿರ್ದೇಶಕರು (ವೃತ್ತಿ ಶಿಕ್ಷಣ)<br>ರೂ. 14050-25050 |

| | | |
|---|---|---|
| 2 | ವಿಷಯ ಪರಿವೀಕ್ಷಕರು (ಕ್ರಾಫ್ಟ್) ಜಿಲ್ಲಾ ಉಪ ನಿರ್ದೇಶಕರ ಕಛೇರಿ, (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ.<br>ರೂ. 11400–21600 | ವಿಷಯ ಪರಿವೀಕ್ಷಕರು, (ವೃತ್ತಿ ಶಿಕ್ಷಣ) ಜಿಲ್ಲಾ ಉಪ ನಿರ್ದೇಶಕರ ಕಛೇರಿ (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.<br>ರೂ. 11400–21600 |
| 3 | ಜಿಲ್ಲಾಧಿಕಾರಿ, ಕ್ರೀಡೆ ಮತ್ತು ದೈಹಿಕ ಶಿಕ್ಷಣ, ಜಿಲ್ಲಾ ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ<br>ರೂ. 14050–25050 | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ, ಜಿಲ್ಲಾ ಉಪ ನಿರ್ದೇಶಕರ ಕಛೇರಿ (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ<br>ರೂ. 14050–25020 |
| 4 | ಕ್ಷೇತ್ರಾಧಿಕಾರಿ, ಕ್ರೀಡೆ ಮತ್ತು ದೈಹಿಕ ಶಿಕ್ಷಣ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ.<br>ರೂ. 11400–21600 | ದೈಹಿಕ ಶಿಕ್ಷಣ ಪರಿವೀಕ್ಷಕರು, ಕ್ಷೇತ್ರ ಶಿಕ್ಷಣ ಅಧಿಕಾರಿಗಳ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ.<br>ರೂ. 11400–21600 |
| 5 | ಸಂಸ್ಕೃತ ಶಾಲೆಗಳ ನಿರೀಕ್ಷಕರು, ವಿಭಾಗ ಜಂಟಿ ನಿರ್ದೇಶಕರ ಕಛೇರಿ.<br>ರೂ. 11400–21600 | ವಿಷಯ ಪರಿವೀಕ್ಷಕರು, (ಸಂಸ್ಕೃತತ)<br>ರೂ. 11400–21600 |

**ಭಾಗ- II**

| | | |
|---|---|---|
| 1 | ಪದವೀಯೇತರ ಮುಖ್ಯ ಶಿಕ್ಷಕರು/ ಮುಖ್ಯ ಶಿಕ್ಷಕಿಯರು, ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಗಳು<br>ರೂ. 8825–14800 | ಪದವೀಧರೇತರ ಮುಖ್ಯ ಶಿಕ್ಷಕರು/ ಮುಖ್ಯ ಶಿಕ್ಷಕಿಯರು, ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಗಳು<br>ರೂ. 8825–16000 |

**ಭಾಗ- III**

| | | |
|---|---|---|
| 1 | ಕ್ರಾಫ್ಟ್ ಶಿಕ್ಷಕರು ಗ್ರೇಡ್–1, ಸರ್ಕಾರಿ ಪ್ರೌಢಶಾಲೆಗಳು, ಸ.ಪ.ಪೂ.ಕಾ. (ಪ್ರೌಢಶಾಲಾ ವಿಭಾಗ) ಸಂಯುಕ್ತ ಪ್ರೌಢಶಾಲೆಗಳು ಮತ್ತು ಶಿಕ್ಷಕರ ಶಿಕ್ಷಣ ಸಂಸ್ಥೆಗಳು.<br>ರೂ. 8000–14800 | ವೃತ್ತಿ ಶಿಕ್ಷಣ ಶಿಕ್ಷಕರು ಗ್ರೇಡ್–1 ಸರ್ಕಾರಿ ಪ್ರೌಢಶಾಲೆಗಳ ಸ.ಪ.ಪೂ.ಕಾ. (ಪ್ರೌಢಶಾಲೆ ವಿಭಾಗ) ಸಂಯುಕ್ತ ಪ್ರೌಢಶಾಲೆಗಳು ಮತ್ತು ಶಿಕ್ಷಕರ ಶಿಕ್ಷಣ ಸಂಸ್ಥೆಗಳು.<br>ರೂ. 8000–14800 |
| 2 | ಶಿಕ್ಷಣ ಸಹಾಯಕ (ಕ್ರಾಫ್ಟ್) ಸಾ.ಶಿ. ಆಯುಕ್ತರ ಕಛೇರಿ, ಬೆಂಗಳೂರು.<br>ರೂ. 8000–14800 | ಶಿಕ್ಷಣ ಸಹಾಯಕ (ವೃತ್ತಿ ಶಿಕ್ಷಣ) ಸಾ.ಶಿ.ಇ. ಆಯುಕ್ತರ ಕಛೇರಿ, ಬೆಂಗಳೂರು.<br>ರೂ. 8000–14800 |

| | | |
|---|---|---|
| 3 | ಕ್ರಾಫ್ಟ್ ಶಿಕ್ಷಕರು ಗ್ರೇಡ್-2, ಸರ್ಕಾರಿ ಪ್ರೌಢಶಾಲೆಗಳು ಸ.ಪ.ಪೂ.ಕಾ. (ಪ್ರೌಢಶಾಲಾ ವಿಭಾಗ) ಸಂಯುಕ್ತ ಪ್ರೌಢಶಾಲೆಗಳು ಮತ್ತು ಶಿಕ್ಷಕರ ಶಿಕ್ಷಣ ಸಂಸ್ಥೆಗಳು.<br>ರೂ. 8000-14800 | ವೃತ್ತಿ ಶಿಕ್ಷಣ ಶಿಕ್ಷಕರ ಗ್ರೇಡ್-2, ಸರ್ಕಾರಿ ಪ್ರೌಢಶಾಲೆಗಳು ಸ.ಪ.ಪೂ.ಕಾ. (ಪ್ರೌಢಶಾಲಾ ವಿಭಾಗ) ಸಂಯುಕ್ತ ಪ್ರೌಢಶಾಲೆಗಳು ಮತ್ತು ಶಿಕ್ಷಕರ ಶಿಕ್ಷಣ ಸಂಸ್ಥೆಗಳು<br>ರೂ. 6250-12000 |

**ಭಾಗ- IV**

| | | |
|---|---|---|
| 1 | ಗುಮಾಸ್ತೆ ಕಂ ಬೆರಳಚ್ಚುಗಾರರು<br>ರೂ. 5800-10500 | ಡಾಟಾ ಎಂಟ್ರಿ ಆಪರೇಟರ್ಸ್<br>ರೂ. 5800-10500 |

ಭಾರತದ ರಾಷ್ಟ್ರಪತಿಗಳ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಎಂ. ಹಿರೇಮಠ),
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ, ಸೇವೆಗಳು (1-2).

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಮತ್ತು 100(ನೂರು) ಪ್ರತಿಗಳನ್ನು ಶಿಕ್ಷಣ ಇಲಾಖೆ, ಸೇವೆಗಳು-2 ಶಾಖೆಗೆ ಪೂರೈಸಲು ಕೋರಿದೆ.

ಪ್ರತಿಗಳು:

1) ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗ.
4) ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, (ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮುಖಾಂತರ)

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ: ಸಿ1(3)(1) ವೃಶೇನಿ ಸಪ/2001(ಭಾಗ 2) ದಿನಾಂಕ: 05-06-2008

**ಸುತ್ತೋಲೆ**

ಮೇಲ್ಕಂಡ ಸರ್ಕಾರದ ಆದೇಶ ಸಂಖ್ಯೆ: ಇಡಿ 6 ಡಿಜಿಟಿ 2008 ದಿನಾಂಕ: 12-05-2008ರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

(ಬಿ. ನಂಜುಂಡೇಶ್ವರ)
ಸಹ ನಿರ್ದೇಶಕರು (ಆಡಳಿತ)
ಆಯುಕ್ತರ ಪರವಾಗಿ

ಪ್ರತಿಗಳು:

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
3. ನಿರ್ದೇಶಕರು (ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು.
4. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು.
5. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬೆಂಗಳೂರು.
6. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.
7. ಸಹ ನಿರ್ದೇಶಕರು, ಬೆಂಗಳೂರು ವಿಭಾಗ/ ಮೈಸೂರು ವಿಭಾಗ.
8. ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಕಳುಹಿಸುತ್ತಾ, ಅಧೀನ ಕಛೇರಿಗಳಿಗೆ ಆದೇಶದ ಪ್ರತಿಯನ್ನು